# <u>ನಿನ್ನ ಮಗನ ಲೂಟಿ ಘನವಮ್ಮ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchha Rayaru, page No. 66
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 103.
3. **Note:** These lyrics are not available in the books of Pavanje Guru Rao.
4. **Note:** Lyrics given without highlights are as per Ref. 2. The wordings given in yellow highlights are as per Ref. 1.
5. **Note:** Singer has followed lyrics as in Ref. 2.

| | |
|---|---|
| ರಾಗ: ಬಿಲಹರಿ ತಾಳ: ಛಾಪು | ರಾಗ: ಬಿಲಹರಿ ತಾಳ: ಅಟ |
| | |
| ನಿನ್ನ ಮಗನ ಲೂಟಿ ಘನವಮ್ಮ | ನಿನ್ನ ಮಗನ ಲೂಟಿ ಘನವಮ್ಮ ಕರೆದು |
| ಕರೆದು ರಂಗಗೆ ಬುದ್ಧಿಯ ಪೇಳೆ ಗೋಪೆಮ್ಮ \|\| ಪ \|\| | ಚಿಣ್ಣಗೆ ಬುದ್ಧಿಯ ಹೇಳೇ ಗೋಪಮ್ಮ |
| | |
| ಹಾಲು ಕಾಯುವಲ್ಲಿ ಇವನ ಗಾಳಿ ಘನವಮ್ಮ | ಶಿಶುಗಳ ಕೈಲಿದ್ದ ಬೆಣ್ಣೆಗೆ ಉಳಿವಿಲ್ಲ |
| ಕಾಲು ತಂದು ಕೇಲಿನೊಳಗೆ ಅದ್ದಿ | ಪಶು ಕರುಗಳಿಗೆ ಮೀಸಲುಗಳಿಲ್ಲ |
| ಪೋದನಮ್ಮ ಕೋಲ ತಂದು | ಮೊಸರ ಮಡಕೆಯಲಿ ಮಾರಿ ಹೊಕ್ಕಂತಾಯ್ತು |
| ಕೊಲ್ಲ ಪೋದರೆ ಓಡಿ ಪೋದನಮ್ಮ \|\| ೧ \|\| | ಶಶಿಮುಖಿಯರು ಗೋಳಿಡುತಿಹರಮ್ಮ |
| | |
| ಮೊಸರು ಕಡೆವಲ್ಲಿ ಇವನ ಗಾಳಿ ಘನವಮ್ಮ | ಮರೆತು ಮಲಗಿದ್ದವರ ಮೊಲೆಗಳ ತಾನುಂಬ |
| ಶಿಶುವಿನ ಕೈಯಲಿ ಬೆಣ್ಣೆ ಉಳಿಗೊಡನಮ್ಮ | ಕಿರಿಯ ಮಕ್ಕಳಿಗೆ ಮೊಲೆಹಾಲಿಲ್ಲವೊ |
| ಮೊಸರು ಮಾರುವರು ಮೊರೆಯಿಡುವರಮ್ಮ | ಹೊರಗೆ ಲೂಟಿ ಒಳಗೆ ಈ ಲೂಟಿ ಎ- |
| ಶಶಿಮುಖಿಯರು ಹೀಗೆ ದೂರುವರಮ್ಮ \|\| ೨ \|\| | ಚ್ಚರದ ಬಟ್ಟೆಯ ಕಾಣೆವಮ್ಮ ಗೋಪಮ್ಮ |
| | |
| ಊರೊಳು ಬರಲೀಸ ಕೇರಿಯೊಳು ಸುಳಿಯಲೀಸ | ಊರೋಳಗಿರಲೀಸ ಊರ ಬಿಟ್ಟು ಹೋಗಲೀಸ |
| ಈರೇಳು ಲೋಕಕ್ಕೆ ಒಡೆಯ ತಾನಂತೆ | ಈರೇಳು ಭುವನಕೆ ಒಡೆಯನಂತೆ |
| ಧೀರ ಶ್ರಿ ಪುರಂದರ ವಿಠಲ ರಾಯನ | ವಾರಿಜನಾಭ ಶ್ರೀ ಪುರಂದರ ವಿಠ್ಠಲನ |
| ಕೇರಿ ಬಸವನ ಮಾಡಿಬಿಟ್ಟೆ ಗೋಪೆಮ್ಮ \|\| ೩ \|\| | ಕೇರಿಯ ಬಸವನ ಮಾಡಿ ಬಿಟ್ಟೆಯಮ್ಮ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಘನ** – ದೊಡ್ಡದು.

**ಗಾಳಿ** – ಉದ್ದೇಶವಿಲ್ಲದ ಆಟ; ಚೆಲ್ಲಾಟ.

**ಕೇಲಿನೊಳಗೆ** – ಕೇಲು, ಮಣ್ಣಿನ ಗಡಿಗೆ.

**ಬರಲೀಸ** – ಬರಗೊಡುವುದಿಲ್ಲ.

**ಕೇರಿಬಸವ** – ಊರಲ್ಲಿ ಅಡೆತಡೆಯಿಲ್ಲದೆ ತಿರುಗಾಡುವ ಗಂಡುಗೂಳಿ.

**ಬಟ್ಟೆ** = ಹಾದಿ

**Classification:** Keerthane
**Ankita:** sri purandara vittala
**Location:** NA
**Category:** Krishna Leele,
**Sub-Category:** Krishna, benne, maga, gopi, govu, makkalu, ooru, loka, keri, halu, ranga, keri, buddi, koosu,
**Pravachana:** NA
**Explanation:** NA